





ಪಾಲಿಸಬೇಕಾಗುತ್ತದೆ. ಎಂದರೆ ಕಲರ್, ಕ್ಲಾರಿಟಿ, ಕಟ್ ಮತ್ತು ಕ್ಯಾರಟ್.. ಈ ಅಂಶಗಳನ್ನು ಗಮನಿಸಿ ಕೊಂಡುಕೊಳ್ಳುವುದು ಅಗತ್ಯ. ಕೆಂಪು ಹರಳಿನ ಒಡವೆ ಖರೀದಿಸುವಾಗ ಅದರ ಬಣ್ಣವನ್ನು ಗಮನಿಸುವುದೂ ಮುಖ್ಯ. ಏಕೆಂದರೆ ಹರಳುಗಳ ಬೆಲೆ ನಿರ್ಧರಿಸುವಲ್ಲಿ ಈ ಬಣ್ಣಗಳ ಸಾಂದ್ರತೆ ಕೂಡ ಗಣನೆಗೆ ಬರುತ್ತದೆ.

'ಕೆಂಪು ಹರಳಿನ ಬಣ್ಣ ಹೆಚ್ಚು ಗಾಢವಾಗಿಯೂ ಇರಬಾರದು ಮತ್ತು ಹೆಚ್ಚು ತಿಳಿಯಾಗಿಯೂ ಇರಬಾರದು. ಬೆಳಕಿನ ತೀವ್ರತೆಯನ್ನು ಅನುಸರಿಸಿ ಹರಳಿನ ಬಣ್ಣ ನಮಗೆ ಕಾಣುತ್ತದೆ. ವಿಶೇಷವಾಗಿ ಕೆಂಪು ಹರಳು ಬೆಳಗಿನ ಸಮಯದಲ್ಲಿ ಒಂದು ರೀತಿಯ ಶೇಡ್‌ನಲ್ಲಿ ಕಂಡರೆ, ಮಧ್ಯಾಹ್ನದ ತೀಕ್ಷ್ಣ ಬೆಳಕಿಗೆ ಬೇರೆ ರೀತಿಯಾಗಿ ಕಾಣಿಸುತ್ತದೆ. ವಿದ್ಯುತ್ ದೀಪದ ಬೆಳಕಿನಲ್ಲಿ ಅತ್ಯಂತ ಪ್ರಕಾಶಮಾನವಾಗಿ ಕಂಡರೆ ಸೂರ್ಯನ ಬೆಳಕಿನಲ್ಲಿ ಹರಳು ಅಷ್ಟೊಂದು ಪ್ರಜ್ವಲಿಸಿದಂತೆ ಕಾಣುವುದಿಲ್ಲ. ಹೀಗಾಗಿ ಹರಳಿನೊಡವೆ ಖರೀದಿಸುವಾಗ ಬಣ್ಣದ ಮೇಲೆ ಹೆಚ್ಚಿನ ನಿಗಾ ಇಡಬೇಕಾಗುತ್ತದೆ' ಎಂದು ಸಲಹೆ ನೀಡುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಒಡವೆ ವರ್ತಕ ಮದನ್‌ಲಾಲ್ ಚಾವ್ಲಾ.

'ಕೆಂಪು ಹರಳಿನ ಆಭರಣಗಳನ್ನು ಇತರ ಒಡವೆಗಳ ಜೊತೆ ಮಿಕ್ಸ್ ಮಾಡಿ ಇಡಬೇಡಿ. ಆದಷ್ಟು ಪ್ರತ್ಯೇಕವಾಗಿಯೇ ಸಂಗ್ರಹಿಸಿ ಇಡಿ ಎಂದು ಕಿವಿಮಾತು ಹೇಳುವ ಚಾವ್ಲಾ ಅವರು, ಒಮ್ಮೆ ಬಳಸಿದ ಮೇಲೆ ಶುಭ್ರವಾದ ನೀರಿನಲ್ಲಿ ತೊಳೆದು ಅಥವಾ ಟಿಶ್ಯು ಪೇಪರ್‌ನಲ್ಲಿ ವರೆಸಿ ಇಡಬೇಕು. ಇಲ್ಲವಾದರೆ ಹರಳಿಗೆ ಧೂಳು, ಜಿಡ್ಡು ಮುಂತಾದವು ಸೇರಿ ಒಡವೆ ಹೊಳಪು ಕಳೆದುಕೊಳ್ಳುವ ಸಾಧ್ಯತೆ ಇದೆ' ಎನ್ನುತ್ತಾರೆ. ■

## ಅಮೂಲ್ಯ ಹರಳುಗಳು

- ಹರಳಿನೊಡವೆ ಎಲ್ಲರಿಗೂ ಇಷ್ಟವೇ. ಏಕೆಂದರೆ ಒಡವೆಗಳಲ್ಲಿರುವ ಹರಳುಗಳು ಹೊಳಪನ್ನು ನೀಡುತ್ತದೆ. ಜೊತೆಗೆ ಆಭರಣದ ಗುಣಮಟ್ಟವನ್ನೇ ಬದಲಾಯಿಸಿಬಿಡುತ್ತವೆ. ರೂಬಿ, ವಜ್ರ, ಪಚ್ಚೆ, ನೀಲ, ಮಾಣಿಕ್ಯ, ಹವಳ, ಪುಷ್ಯರಾಗದಂತಹ ಅಮೂಲ್ಯ ಹರಳುಗಳು ಎಲ್ಲ ಉಡುಪುಗಳಿಗೂ ಚೆನ್ನಾಗಿ ಮ್ಯಾಚ್ ಆಗುತ್ತವೆ. ಅಷ್ಟೇ ಅಲ್ಲದೆ ಅಮೆಥಿಸ್ಟ್, ಗೋಮೇಧಿಕ, ಅಕ್ವಾಮರೈನ್‌ನಂತಹ ಹರಳುಗಳೂ ಒಡವೆಯ ಅಂದವನ್ನು ಹೆಚ್ಚಿಸುತ್ತವೆ.
- ಗೋಮೇಧಿಕ ಅಥವಾ ಜಿರ್ಕಾನ್ ಹರಳು ನೋಡಲು ಆಕರ್ಷಕವಾಗಿರುತ್ತದೆ. ಇದನ್ನು ಧರಿಸುವುದರಿಂದ ಏಕಾಗ್ರತೆ ಹೆಚ್ಚುತ್ತದೆ ಮತ್ತು ನಿದ್ರಾಹೀನತೆಯ ಸಮಸ್ಯೆ ದೂರವಾಗುತ್ತದೆ ಎನ್ನುತ್ತಾರೆ ಹಿರಿಯರು.
- ಅಕ್ವಾಮರೈನ್ ಎಂಬ ಹರಳು ಸಮುದ್ರ ನೀಲಿ ರಂಗಿನಲ್ಲಿದ್ದು. ಎಮರಾಲ್ಡ್ ವರ್ಗಕ್ಕೆ ಸೇರುತ್ತದೆ. ಇದನ್ನು ದೊಡ್ಡ ಪೆಂಡೆಂಟ್‌ಗೆ ಹಾಕಿದಲ್ಲಿ ಒಂದೇ ಸರ ಧರಿಸಬಹುದು. ಒಂದೇ ಹರಳು ಉಂಗುರದಲ್ಲೂ ಬಳಸಬಹುದು. ಸ್ಟಡ್‌ಗೂ ಚೆನ್ನಾಗಿ ಕಾಣುತ್ತದೆ.
- ಗಾರ್ನೆಟ್, ನೆಕ್ಲೇಸ್‌ಗೆ ಅತ್ಯಂತ ಸೂಕ್ತವಾದ ಹರಳು ಇದು. ಮೆರೂನ್ ಅಥವಾ ಗಾಢ ಕೆಂಪು ಬಣ್ಣದಿಂದ ಕೂಡಿದ ಈ ಹರಳು ಬಳಸಿದ ಒಡವೆ ಸಾಂಪ್ರದಾಯಿಕ ಉಡುಗೆ ಸೀರೆ, ಗಾಗ್ರ ಚೋಲಿಗೆ ಚೆನ್ನಾಗಿ ಒಪ್ಪುತ್ತದೆ.

## ರೂಬಿ ಎಂಬ ಮಾಣಿಕ್ಯ

**ರೂಬಿ** ಎಂಬ ಕೆಂಪು ಮಿಶ್ರಿತ ಗುಲಾಬಿ ಬಣ್ಣದ ಹರಳು ಆಭರಣ ಪ್ರಪಂಚದಲ್ಲಿ ಹೆಚ್ಚು ಬೇಡಿಕೆ ಇರುವಂಥ ಅಮೂಲ್ಯ ರತ್ನ. ಚಿನ್ನದ ಮೇಲೆ ರೂಬಿ ಸೇರಿಸಿದ ಒಡವೆ ಫ್ಯಾಷನಬಲ್ ಅಲ್ಲದೆ ಸಾಮಾನ್ಯವಾಗಿ ಎಲ್ಲ ರೀತಿಯ ಉಡುಗೆಗಳಿಗೂ ಸೂಕ್ತವಾದವು. ಇದೀಗ ಕಂಟೆಂಪರರಿ ಸ್ಟೈಲ್‌ನ ಹರಳುಗಳಿರುವ ಆಭರಣಗಳನ್ನು ಧರಿಸುವುದು ಕೂಡ ಫ್ಯಾಷನ್ ಆಗಿದೆ. ಒಂದೇ ಒಂದು ರತ್ನ ಖಚಿತ ಆಭರಣ ಅಥವಾ ಒಂದಕ್ಕಿಂತ ಹೆಚ್ಚು ಹರಳುಗಳಿರುವ ಆಭರಣಗಳು ಕೂಡಾ ಫ್ಯಾಷನ್ ಸ್ಟೇಟ್‌ಮೆಂಟ್ ಕೊಡಬಲ್ಲವು.

ರೂಬಿ ಹರಳುಗಳನ್ನು ಚಿನ್ನದಲ್ಲಿ ಕೂರಿಸಿ ಮಾಡಿದ ಒಡವೆಗಳು ಅತ್ಯಾಕರ್ಷಕ. ಅದು ನೆಕ್ಲೇಸ್ ಆಗಿರಲಿ, ಕಿವಿಯೋಲೆ, ಉಂಗುರ, ಪೆಂಡೆಂಟ್, ಬ್ರೇಸ್ಲೆಟ್, ಬಳೆಯೇ ಆಗಿರಲಿ, ಸಖತ್ ಲುಕ್ ಕೊಡುತ್ತದೆ. ರೂಬಿ ಹರಳು ಇಡೀ ಆಭರಣದ ಚೆಲುವು, ಸೊಬಗನ್ನೇ ಇಮ್ಮಡಿಸಬಲ್ಲದು.

ರೂಬಿ ಇತರ ಹರಳುಗಳಿಗಿಂತಲೂ ಬಹಳ ದುಬಾರಿ. ಇದು ಅಲ್ಯುಮಿನಿಯಂ ಆಕ್ಸೈಡ್‌ನ ಒಂದು ವಿಧ ಎನ್ನಲಾಗಿದೆ. ಅತ್ಯಂತ ನೈಜವಾಗಿರುವ ಇದರ ಕೆಂಪು–ಗುಲಾಬಿ ಮಿಶ್ರಿತ ಬಣ್ಣ ಕ್ರೋಮಿಯಂ ಘಟಕದ ಅಸ್ತಿತ್ವದಿಂದ ಉಂಟಾಗುತ್ತದೆ. ಇದರ ಬೆಲೆ ನಿಗದಿಯಾಗುವುದು ರೂಬಿಯ ಬಣ್ಣಗಳಿಂದ. ವಿವಿಧ ಆಕಾರ, ಕಟ್ ಮತ್ತು ತೂಕದಿಂದಲೂ ಇದರ ಬೆಲೆಯನ್ನು ನಿರ್ಧರಿಸಲಾಗುತ್ತದೆ ಎನ್ನುತ್ತಾರೆ ವರ್ತಕರು.

ಕೆಂಪು ಹರಳು, ರೂಬಿ ಎರಡೂ ಬೇರೆ ಬೇರೆ. ಕೆಂಪು ಹರಳಿಗಿಂತಲೂ ರೂಬಿ ಹೆಚ್ಚು ಬಾಳಿಕೆ ಬರುವಂಥವು ಮತ್ತು ದುಬಾರಿ ಕೂಡ. ರೇಷ್ಮೆ ಸೀರೆ, ಲೆಹಂಗಾ.. ಹೀಗೆ ಎಲ್ಲ ರೀತಿಯ ಉಡುಪುಗಳಿಗೆ ರೂಬಿ ಸಖತ್ ಆಗಿ ಮ್ಯಾಚ್ ಆಗುತ್ತದೆ. ಅಲ್ಲದೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ರೂಬಿ ಸಹಕಾರಿ.